ಪಿ.ಡಬ್ಲು. 2

**ಸಾಕ್ಷಿಯನ್ನು ದಿನಾಂಕಃ 28.06.2024 ರಂದು ಕರೆದು ಪ್ರಮಾಣ ವಚನ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ ಕೆ.ವಿ.ಕೆ. ಪ್ರತಿವಾದಿ ನಂ.1 ರಿಂದ 3 ಮತ್ತು 5 ರಿಂದ 7 ರ ಪರ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಜಗದಾಳ ಗ್ರಾಮದ ಹೊಲ ಮಾರಿ ದಾವಾ ಆಸ್ತಿಗಳನ್ನು ವಾದಿ ಖರೀದಿಸಿದ್ದಾರೆ ಎಂದು ಬರೆಸಿದ್ದೇನೆ ಎಂದರೆ ಸರಿ. ಜಗದಾಳ ಗ್ರಾಮದ ಮಾರಾಟ ಮಾಡಿದ ಜಮೀನಿನ ಸರ್ವೆ ನಂಬರ ನನಗೆ ಗೊತ್ತಿಲ್ಲ. ಸುಮಾರು 35 ವರ್ಷಗಳ ಹಿಂದೆ ಸದರಿ ಜಮೀನು ಮಾರಿರುತ್ತಾರೆ.

ಜಗದಾಳದ ಜಮೀನಿಗೆ ಸಂಬಂದಪಟ್ಟ ವ್ಯವಹಾರದ ಬಗ್ಗೆ ನನಗೆ ಪ್ರತಿವಾದಿ 4 ಮತ್ತು 5 ತಿಳಿಸಿರುತ್ತಾರೆ. ಪ್ರತಿವಾದಿ 4 ಮತ್ತು 5 ರಿಗೆ ಜಗದಾಳ ಜಮೀನುಗಳ ವ್ಯವಹಾರದ ಬಗ್ಗೆ ಮಾಹಿತಿ ಇದೆ. ಜಗದಾಳ ಜಮೀನು ಮಾರಾಟ ಮಾಡಿದ ಕುರಿತು ಪ್ರತಿವಾದಿ 4 ಮತ್ತು 5 ನನಗೆ ಖರೀದಿ ಪತ್ರ ಆಗಲಿ ಅಥವಾ ಅದರ ನಕಲಾಗಲಿ ತೋರಿಸಿಲ್ಲ.

ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸುವ ಪೂರ್ವದಲ್ಲಿ ವಾದಿಯರು ಏನು ದಾವೆ ಯಾರ ವಿರುದ್ಧ ದಾಖಲಿಸಿದ್ದಾರೆ ಎಂದು ಕೇಳಿ ತಿಳಿದುಕೊಂಡಿದ್ದೇನೆ. ವಾದಿಯರು ತಮ್ಮ ವಾದ ಪತ್ರದಲ್ಲಿ ಜಗದಾಳ ಗ್ರಾಮದಲ್ಲಿದ್ದ ಜಮೀನನ್ನು ಮಾರಾಟ ಮಾಡಿ ದಾವಾ ಜಮೀನು ಖರೀದಿ ಮಾಡಿದ್ದರ ಬಗ್ಗೆ ನಮೂದಿಸಿಲ್ಲ.

ಪ್ರತಿವಾದಿ ನಂ.6 ಪ್ರತಿವಾದಿ ನಂ.1 ರ ಸ್ವಂತ ಮಗಳು ಎಂದರೆ ಸರಿ. ನನಗೆ ಗಂಗಪ್ಪ ಮತ್ತು ಅವರ ಅಣ್ಣ ಶಂಕ್ರಪ್ಪ ಇವರ ಬಗ್ಗೆ ಮಾಹಿತಿ ಇದೆ. 17.06.1982 ರಲ್ಲಿ ಗಂಗಪ್ಪ ಮತ್ತು ಶಂಕ್ರಪ್ಪ ಕೂಡಿ ಅಮೃತಗೌಡ ಗೌಡಪ್ಪಗೌಡ ನಾಡಗೌಡರ ಇವರಿಂದ ದಾವಾ ಜಮೀನುಗಳನ್ನು ಖರೀದಿ ಪಡೆದಿದ್ದರು ಎಂದರೆ ಸರಿ. 30.07.1990 ರಂದು ಶಂಕ್ರಪ್ಪ ಇವರು ಗಂಗಪ್ಪ ಇವರಿಗೆ 2 ಎಕರೆ ಜಮೀನನ್ನು ಮಾರಾಟ ಮಾಡಿದ್ದರು ಎಂದರೆ ಸರಿ.

ಸಿಟಿಎಸ್ ಆಸ್ತಿಗಳನ್ನು ಸಹ ಗಂಗಪ್ಪ ಇವರು ಖರೀದಿ ಪಡೆದುಕೊಂಡಿದ್ದರು ಎಂದರೆ ಸರಿ. ದಾವಾ ಸಿಟಿಎಸ್ ಆಸ್ತಿಗಳ ಕಬ್ಜಾ ವಹಿವಾಟಿಯಲ್ಲಿ ಈಗ ಯಾರಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ದಿನಾಂಕಃ 06.05.2010 ರಲ್ಲಿ ದಾವಾ ಸಿಟಿಎಸ್ ಆಸ್ತಿಗಳನ್ನು ಗಂಗಪ್ಪ ಇವರು ತನ್ನ ಮಗಳು ಪ್ರತಿವಾದಿ 6 ಇವರಿಗೆ ನೋಂದಾಯಿತ ಭಕ್ಷಿಸ ಪತ್ರದ ಮೂಲಕ ದಾನ ಮಾಡಿದ್ದಾರೆ ಎಂದರೆ ಸರಿ.

ದಾವಾ ಆಸ್ತಿ ನನ್ನ ಪ್ರಕಾರ ಗಂಗಪ್ಪನ ಆಸ್ತಿಯೋ ಅಥವಾ ಆತನ ಹಿರಿಯರ ಆಸ್ತಿಯೋ ಎಂಬ ಪ್ರಶ್ನೇಗೆ ಸಾಕ್ಷಿ ಹಿರಿಯರ ಆಸ್ತಿ ಅಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ

ಪ್ರತಿವಾದಿ 4 ಮತ್ತು 5 ಮಾಹಿತಿ ನೀಡಿರುತ್ತಾರೆ.

ದಾವಾ ಆಸ್ತಿಗಳು ವಾದಿ ಮತ್ತು ಪ್ರತಿವಾದಿಯರ ಏಕತ್ರ ಕುಂಟುಂಬದ ಆಸ್ತಿಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿನ ಸಂಗತಿ ಸುಳ್ಳು ಎಂದರೆ ಸರಿಯಲ್ಲ. ಜಗದಾಳ ಗ್ರಾಮದ 1 ಎಕರೆ ಜಮೀನು ಮಾರಾಟ ಮಾಡಿ ದಾವಾ ಆಸ್ತಿ ಖರೀದಿ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

35 ವರ್ಷಗಳ ಹಿಂದೆ ಜಗದಾಳ ಗ್ರಾಮದಲ್ಲಿ 1 ಎಕರೆಗೆ ಅಂದಾಜು 1000 ಬೆಲೆ ಇತ್ತು ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರು ಸಹಿತ ಪ್ರತಿವಾದಿ 6 ಇವರಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು

ಮುಧೋಳ.

ಸಾಕ್ಷಿಯ ಸಹಿ